O.S. ನಂಬರಃ 02/2022

ಪಿ. ಡಬ್ಲ್ಯೂ: 1

ದಿಃ 20-03-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಆರ್.ಎನ್. ವಕೀಲರಿಂದಃ</u>

ಸರ್ವೇ ನಂ. 92 1931-32 ರಲ್ಲಿ 1-ಎಕರೆ, 21-ಗುಂಟೆ ಇತ್ತು ಎಂದರೆ ಮಾಹಿತಿ ಇಲ್ಲ. ಸದರಿ ಜಮೀನಿಗೆ ಗೋವಿಂದ ಸುಬ್ರಾಯ ಶೆಟ್ಟಿ ಒಡೆಯನಿದ್ದ ಎಂದರೆ ಸರಿ. ನನ್ನ ಅಜ್ಜನಾದ ಹೊಸಬು ಶಿಕ್ಕಾ ಗೌಡನು 24-ಗುಂಟೆಗೆ ಗೇಣಿದಾರನಿದ್ದ ಎಂದರೆ ಸರಿ. ಸದರಿ ಜಮೀನಿನ ಪೈಕಿ 17-ಗುಂಟೆ ಮಂಕಾಳಿ ಮೊನ್ನಾ ಗೌಡ ಹಾಗೂ 17-ಗುಂಟೆ ಹೊಸಬು ತಮ್ಮಾಣಿ ಗೌಡ ರವರು ಗೇಣಿದಾರರಾಗಿದ್ದರು ಎಂದರೆ ಮಾಹಿತಿ ಇಲ್ಲ. 1950-51 ನೇ ಸಾಲಿನಲ್ಲಿ ಸರ್ವೇ ನಂ. 92/1 ಎಂದು ಸದರಿ ಜಮೀನು ಹಿಸ್ಸೆಯಾಗಿ ನನ್ನ ತಂದೆಯ ಹೆಸರಿನಲ್ಲಿ 24-ಗುಂಟೆ 5-ಆಣೆ, ಮಂಕಾಳಿ ಮೊನ್ನಾ ಗೌಡ ಹಾಗೂ ವೆಂಕಟಾ ಮೊನ್ನಾಗೆ ಸೇರಿ 24-ಗುಂಟೆ 5-ಆಣೆ, ಹೊಸಬು ತಮ್ಮಾಣಿಗೆ 10-ಗುಂಟೆ 5-ಆಣೆ ಜಮೀನು ನಮೂದನೆಯಾಗಿದೆ ಎಂದರೆ ಮಾಹಿತಿ ಇಲ್ಲ. ನನ್ನ ಅಜ್ಜನ ಹೆಸರಿನಲ್ಲಿದ್ದ ಜಮೀನು ನನ್ನ ತಂದೆ ಹೆಸರಿಗೆ ಆಗಿದೆ ಎಂದರೆ ಸರಿ. ನನ್ನ ತಂದೆಯಿಂದ ನನಗೆ ಆಸ್ತಿ ಬಂದಿದೆ ಎಂದರೆ ಸರಿ.

ವೆಂಕಟನ ಜಮೀನು ದುರ್ಗುನಿಗೆ ಬಂದಿದ್ದು, ದುರ್ಗುನ ನಂತರ ಪ್ರತಿವಾದಿಯರಿಗೆ ಜಮೀನು ಪ್ರಾಪ್ತವಾಗಿದೆ ಎಂದರೆ ಸರಿ. ಆ ನಂತರ ನಮ್ಮ ಆಸ್ತಿಯಲ್ಲಿ ನಮ್ಮ ತಂದೆ ಕಾಲದಿಂದಲೂ ಮನೆ ಇದೆ ಹಾಗೂ ಪ್ರತಿವಾದಿಯರ ಪೂರ್ವಜರಿಂದಲೂ ಅವರ ಆಸ್ತಿಯಲ್ಲಿ ಅವರು ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿ, ಪ್ರತಿವಾದಿಯರು ನಮ್ಮ ಆಸ್ತಿಯಲ್ಲಿ ಕಟ್ಟಿದ್ದಾರೆ ಎಂದು ಹೇಳುತ್ತಾರೆ. ನಮ್ಮ ಹಿಸ್ಸೆಗೆ ಬಂದ ಆಸ್ತಿಯನ್ನು ನಾನು ಕಂಪೌಂಡ ಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿ ನನ್ನ ಅಜ್ಜನ ಕಾಲದಿಂದಲೂ ಇದೆ ಎಂದು ಹೇಳುತ್ತಾರೆ. ಪ್ರತಿವಾದಿಯರು ತಮ್ಮ ಆಸ್ತಿಗೆ ಕಲ್ಲಿನ ಪಾಗಾರ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ಆಸ್ತಿಯಲ್ಲಿ ಕೋರಿಕೆ ಮೇರೆಗೆ ವಾಸ್ತವ್ಯದ ಮನೆ ಕಟ್ಟಿಕೊಂಡಿರುತ್ತಾರೆ, ಪಾಗಾರ ನಮ್ಮ ಅಜ್ಜನ ಕಾಲದಿಂದಲೂ ಇದೆ ಎಂದು ಹೇಳುತ್ತಾರೆ. ಸದರಿ ಪ್ರತಿವಾದಿಯರ ಮನೆ ನನ್ನ ತಂದೆಯ ಕಾಲದಿಂದಲೂ ಇದೆ ಎಂದರೆ ಸರಿ.

1974 ರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾರೆ ಎಂದರೆ ಇರಬಹುದು. ನಾನಾಗಲೀ, ನನ್ನ ತಂದೆಯಾಗಲೀ ಪ್ರತಿವಾದಿಯರು ಮನೆ ಕಟ್ಟಿಕೊಂಡ ಬಗ್ಗೆ ತಕರಾರು ಮಾಡಿಲ್ಲ ಎಂದರೆ ಪಂಚಾಯತಿಗೆ ಹಾಗೂ ಪೊಲೀಸ್ ಠಾಣೆಗೆ ಅರ್ಜಿ ವಗೈರೆ ಮಾಡಲಾಗಿದೆ ಎಂದು ಹೇಳುತ್ತಾರೆ. ನಮ್ಮ ತಂದೆ ಕಾಲದಿಂದಲೂ ಸಹ ಪ್ರತಿವಾದಿಯರ ಮತ್ತು ನಮ್ಮ ಆಸ್ತಿಯ ಪಾಗಾರ ಅದೇ ರೀತಿ ಮುಂದುವರೆದಿದೆ ಎಂದರೆ ನಮ್ಮ ಪಾಗಾರ ಮಾತ್ರ ಹಾಗೆಯೇ ಮುಂದುವರೆದಿದೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಹಾಗೂ ಅವರ ತಂದೆ ಶಾಲೆ ಕಲಿತವರಲ್ಲ ಎಂದರೆ ಸರಿಯಲ್ಲ, ಸಾಕ್ಷಿ ನಾನೇ ಅನಕ್ಷರಸ್ಥ ಎಂದು ಹೇಳುತ್ತಾರೆ. ನಾನೇ ತುಂಬಾ ಆರ್ಭಟದಿಂದ ಇರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 10 ನೇ

ತರಗತಿಯವರೆಗೆ ಕಲಿತಿದ್ದಾನೆ, 2 ನೇ ಪ್ರತಿವಾದಿ ಸ್ವಲ್ಪ ಕಡಿಮೆ ಕಲಿತಿದ್ದಾನೆ. ವಹಿವಾಟಿ ಪ್ರಕಾರ ಆಸ್ತಿಗಳನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿ. ಪ್ರತಿವಾದಿಯರಿಗೆ ತಿಳುವಳಿಕೆ ಇಲ್ಲದ್ದರಿಂದ ಸರ್ವೇ ನಂಬರ ಕುರಿತಾಗಿ ಅವರಿಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಪೂರ್ವಜರ ಕಾಲದಿಂದಲೂ ಒಂದೇ ರೀತಿಯಾಗಿ ವಹಿವಾಟು ಮಾಡಿಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಕಟ್ಟಿಸಿದ ಮನೆಗಳು, ದನದ ಕೊಟ್ಟಿಗೆಗೆ ಲಕ್ಷಾಂತರ ರೂಪಾಯಿ ಕಿಮ್ಮತ್ತು ಆಗುತ್ತದೆ ಎಂದರೆ ಸರಿ. ಪ್ರತಿವಾದಿಯರ ಆಸ್ತಿಯಲ್ಲಿ ಶೌಚಾಲಯ ಇದೆ ಎಂದರೆ ಸರಿಯಲ್ಲ.

ನಮ್ಮ ಹಾಗೂ ಪ್ರತಿವಾದಿಯರ ನಡುವೆ ರಸ್ತೆ ಸಲುವಾಗಿ ವ್ಯಾಜ್ಯ ಪ್ರಾರಂಭವಾಗಿದೆ ಎಂದರೆ ಸರಿ. ಸದರಿ ರಸ್ತೆ ಮಾಡುವ ಸ್ಥಿತಿಯಲ್ಲಿ ಸ್ಥಳಾವಕಾಶ ಇಲ್ಲ ಎಂದರೆ ಸಾಕ್ಷಿ ಮನೆ ತೆಗೆದುಕೊಂಡು ಹೋಗಲಿ ಎಂದು ಹೇಳುತ್ತಾರೆ. ಸದರಿ ರಸ್ತೆ ಅಜ್ಜನ ಕಾಲದಿಂದಲೂ ಇದೆ ಎಂದರೆ ಸರಿ. ಸದರಿ ರಸ್ತೆ ಮೂಲಕ ನಮ್ಮ ಕೊಟ್ಟಿಗೆ ದನ ಮಾತ್ರ ಓಡಾಡುತ್ತವೆ, ಪ್ರತಿವಾದಿಯರ ದನಗಳು ಬೇರೆ ದಾರಿ ಮುಖಾಂತರ ಓಡಾಡುತ್ತವೆ ಎಂದು ಹೇಳುತ್ತಾರೆ. ಪ್ರತಿವಾದಿಯರನ್ನು ಹೊರಗೆ ಹಾಕಿದರೆ ಅವರು ಬೀದಿಗೆ ಬೀಳುತ್ತಾರೆ ಎಂದರೆ ಸಾಕ್ಷಿ ಅವರ ಜಾಗೆ ಪ್ರತ್ಯೇಕವಾಗಿದೆ, ಅಲ್ಲಿಯೇ ಮಾಡಿಕೊಳ್ಳಬಹುದು ಎಂದು ಹೇಳುತ್ತಾರೆ. ರಸ್ತೆ ಕೊಡಲಿಲ್ಲವೆಂಬ ಹೊಟ್ಟೆಕಿಚ್ಚಿನಿಂದ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.